# ಉದ್ಯಾನ ಇಲಾಖೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

## ಸುತ್ತೋಲೆ

ನಂ. ಕವಿವಿ/ಉದ್ಯಾನ/2024-25/

ದಿನಾಂಕ: 10-6-2024

ಕ.ವಿ.ವಿ ಆವರಣ ಮತ್ತು ಕರ್ನಾಟಕ ಕಾಲೇಜು ಆವರಣ ಮತ್ತು ಇತರ ಅಂಗ ಸಂಸ್ಥೆ ಆವರಣಗಳಲ್ಲಿರುವ - [illegible] - ಫಸಲುಗಳ , ಟೆಂಡರ ವ ಬಹಿರಂಗ ಹರಾಜನ್ನು 2024-25 ನೇ ಸಾಲಿಗೆ ಉದ್ಯಾನ ಇಲಾಖೆಯಲ್ಲಿ ಏರ್ಪಡಿಸಲಾಗಿದೆ. ವಿವರಗಳು ಈ ಕೆಳಗಿನಂತಿವೆ.

| ಅ. ನಂ | ಆವರಣಗಳ ಹೆಸರು | ಗಿಡಗಳ ಸಂಖ್ಯೆ | ಹರಾಜಿನಲ್ಲಿ ಭಾಗವಹಿಸಲು ಕಟ್ಟಬೇಕಾದ ಠೇವಣಿ | ಸುರಕ್ಷಾ ಠೇವಣಿ |
|---|---|---|---|---|
| 1 | ಕ.ವಿ.ವಿ ಆವರಣ ಚಿಕ್ಕು | ಚಿಕ್ಕು-86 | 8000=00 | 1000=00 |
| 2 | ಕ.ವಿ.ವಿ. ಆವರಣ ಸಸ್ಯೋದ್ಯಾನ | ತೆಂಗು-32 | 2500=00 | 500=00 |
| 3 | ಕ.ವಿ.ವಿ. ವಿಶ್ವಚೇತನ ಕಟ್ಟಡದ ಹತ್ತಿರ+ ನರ್ಸರಿ ಹತ್ತಿರ | ತೆಂಗು-38 + ತೆಂಗು-38 | 10000=00 | 1000=00 |
| 4 | ರೇಷ್ಮೆ ತೋಟ+ ಚಿಕ್ಕು ತೋಟ + ಕನ್ನಡ ವಿಭಾಗದ ಹಿಂದೆ ಕ.ವಿ.ವಿ. ಆವರಣ | ತೆಂಗು-35 +ತೆಂಗು-10 ತೆಂಗು-08 | 5000=00 | 1000=00 |
| 5 | ಕರ್ನಾಟಕ ಕಾಲೇಜು ಮತ್ತು ಇತರೇ ಅಂಗ ಸಂಸ್ಥೆಗಳು | ತೆಂಗು-47 | 10000=00 | 1000=00 |
| 6 | ಕರ್ನಾಟಕ ಕಾಲೇಜು ಮತ್ತು ಇತರೇ ಅಂಗ ಸಂಸ್ಥೆಗಳಲ್ಲಿರುವ | ಸಂಪಿಗೆ-02 +ನುಗ್ಗೆ-5 ಅಂಟವಾಳ-02 | 200=00 | 200=00 |

### ಟೆಂಡರ ಕರಾರುಗಳು

1. ಮೇಲ್ಕಾಣಿಸಿದ ಫಸಲುಗಳನ್ನು ಕೊಳ್ಳಲಿಚ್ಛಿಸುವವರು, ಫಸಲು ಗಿಡಗಳನ್ನು ಚೆನ್ನಾಗಿ ಗುರುತಿಸಿಕೊಂಡು ಹಣಕಾಸು ಅಧಿಕಾರಿಗಳು, ಕ.ವಿವಿ ಧಾರವಾಡ ಇವರ ಹೆಸರಿನಲ್ಲಿ ಮೇಲೆ ತಿಳಿಸಿದ ಫಸಲು ಠೇವಣಿ ಹಣವನ್ನು ಪ್ರತಿ ಫಸಲಿಗು ಪ್ರತ್ಯೇಕವಾಗಿ ಹಣದ ಡಿಡಿ ಯನ್ನು ಲಗತ್ತಿಸಬೇಕು. ಮತ್ತು ನಿಗದಿ ಪಡಿಸಿದ ಹಣ ಸಂದಾಯ ಮಾಡಿ ಟೆಂಡರ ಫಾರ್ಮ ಪಡೆದುಕೊಂಡು ಟೆಂಡರನಲ್ಲಿ ಭಾಗವಹಿಸಬೇಕು. ಟೆಂಡರ ಫಾರ್ಮನ್ನು ರೂ. **700=00** + CGST and SGST **(18 %)**= ಒಟ್ಟು ರೂ. **826=00.** ರೂ. **700=00** ಗಳನ್ನು ಚಲನ ಮೂಲಕ ಬ್ಯಾಂಕಿಗೆ ತುಂಬಿ ಉದ್ಯಾನ ವಿಭಾಗದಲ್ಲಿ ತೋರಿಸಿದಾಗ ಟೆಂಡರ ಫಾರ್ಮ ಕೊಡಲಾಗುವದು. CGST and SGST **(126=00)** ಹಣವನ್ನು ನಗದು ರೂಪದಲ್ಲಿ ನೀಡಬೇಕು. ಸದರ ಪ್ರಕ್ರಿಯಯಲ್ಲಿ ಭಾಗವಹಿಸುವವರು ಕಡ್ಡಾಯವಾಗಿ ಟೆಂಡರ ಫಾರ್ಮ ಪಡೆಯಲೇ ಬೇಕು ಮತ್ತು ಟೆಂಡರ ಬಾಕ್ಸನಲ್ಲಿ ಹಾಕಬೇಕು. ಟೆಂಡರ ಫಾರ್ಮ ತುಂಬಿ ಟೆಂಡರ ಡಬ್ಬದಲ್ಲಿ ಹಾಕದೇ ನೇರವಾಗಿ ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ.
2. ದಿನಾಂಕ: **18-6-24** ರಂದು ಮಧ್ಯಾಹ್ನ **3.00 pm** ಗಂಟೆ ಒಳಗಾಗಿ ಟೆಂಡರ ಫಾರ್ಮ ಜೊತೆಯಲ್ಲಿ ವಿಳಾಸವಿರುವ ಪುರಾವೆಯ ಜೆರಾಕ್ಸ ಪ್ರತಿ ಲಗತ್ತಿಸಿ ಸಲ್ಲಿಸಬೇಕು. ಅದೇ ದಿವಸ **3.30 pm** ಗಂಟೆಯ ನಂತರ ಫಸಲು ಮಾರಾಟ ಸಮಿತಿ ಸದಸ್ಯರು ಬಂದ ಬಳಿಕ ಹರಾಜು ನಡೆಸಲಾಗುವದು. ಅವಧಿ ಮೀರಿ ಬಂದ ಟೆಂಡರಗಳನ್ನು ಸ್ವೀಕರಿಸುವದಿಲ್ಲಾ. ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ಕಡ್ಡಾಯವಾಗಿ **3.30** ಗಂಟೆಗೆ ಇರತಕ್ಕದ್ದು. ಇಲ್ಲವಾದಲ್ಲಿ ತಾವು ಲಿಖಿತ ರೂಪದಲ್ಲಿ ಹಾಕಿದ ಟೆಂಡರ ಬೆಲೆಯನ್ನು ಮಾತ್ರ ಪರಿಗಣಿಸಲಾಗುವದು.
3. ಮೊಹರಾದ ಟೆಂಡರಗಳನ್ನು ಹರಾಜಿನ ನಂತರ ತೆರೆದು ಹೆಚ್ಚಿನ ಬೇಡಿಕೆದಾರರಿಗೆ, ಮೇಲಾಧಿಕಾರಿಗಳಿಗೆ ಒಪ್ಪಿಗೆಯಾದಲ್ಲಿ ಫಸಲು ನೀಡಲಾಗುವದು. **ಟೆಂಡರ ಫಾರ್ಮಗೆ ತುಂಬಿದ ಹಣವನ್ನು ಯಾವುದೇ ಕಾರಣಕ್ಕೂ ಮರುಳಿಸಲಾಗುವದಿಲ್ಲಾ.**
4. ಹರಾಜಿನಲ್ಲಿ ಫಸಲು ಪಡೆದವರು ಟೆಂಡರ: ಬಹಿರಂಗ ಹರಾಜು ದರದಲ್ಲಿ ಫಸಲು ಠೇವಣಿ ಹಣ ಹೊರತು ಪಡಿಸಿ ಉಳಿದ ಹಣದ ಕೇವಿಜಾ 75% ರಷ್ಟು ಹಣವನ್ನು ಮರು ದಿನ ಬ್ಯಾಂಕಿನ ಅವಧಿವೊಳಗೆ ತುಂಬಬೇಕು. ಒಂದು ವೇಳೆ ತಾವು ಹಣವನ್ನು ತುಂಬದಿದ್ದಲ್ಲಿ ತಾವು ತುಂಬಿದ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಂಡು, ತಾವು ಕೊಂಡ ಫಸಲುಗಳನ್ನು ಎರಡನೇಯ ಬೇಡಿಕೆದಾರರಿಗೆ ನೀಡಬಹುದಾಗಿದೆ. ಅದಕ್ಕೆ ತಮ್ಮ ಯಾವುದೇ ತಂಟೆ ತಕರಾರುಗಳನ್ನು ಪರಿಗಣಿಸುವದಿಲ್ಲಾ.
5. ಟೆಂಡರ : ಬಹಿರಂಗ ಹರಾಜು ದರಗಳು ಮೇಲಾಧಿಕಾರಿಗಳಿಂದ ಅಂಗೀಕೃತವಾಗಿ ಬಂದ ನಂತರ ಇನ್ನುಳಿದ ಹಣವನ್ನು ಮತ್ತು ಫಸಲು ಸುರಕ್ಷಾ ಠೇವಣಿ ಹಣ ತುಂಬಲು ಸೂಚಿಸಿದಾಗ ನಿಗದಿತ ಸಮಯದಲ್ಲಿ ಹಣವನ್ನು ತುಂಬದಿದ್ದಲ್ಲಿ ತಾವು ತುಂಬಿದ ಠೇವಣಿ ಹಣ ಹಾಗು ಕೇವಿಜಾ 75% ರಷ್ಟು ತುಂಬಿದ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವದು.
6. ಫಸಲುಗಳಿಗೆ ಯೋಗ್ಯ ಧಾರಣೆಯು ಬಾರದಿದ್ದಲ್ಲಿ ಟೆಂಡರ **ಹರಾಜು ದರ ಸ್ವೀಕರಿಸುವ ಅಥವಾ ನಿರಾಕರಿಸುವ ಹಕ್ಕನ್ನು** ಮೇಲಾಧಿಕಾರಿಗಳಿಗೆ ಕಾಯ್ದಿರಿಸಲಾಗಿದೆ. ಸದರ ಟೆಂಡರನಲ್ಲಿ ಭಾಗವಹಿಸಿ ಟೆಂಡರನಲ್ಲಿ ಹೆಚ್ಚಿಗೆ ಬೇಡಿಕೆ ಸಲ್ಲಿಸಿ, ಫಸಲಿನ ಹಣವನ್ನು ಸಂಪೂರ್ಣವಾಗಿ ವಿಶ್ವವಿದ್ಯಾಲಯಕ್ಕೆ ತುಂಬಿ ಫಸಲು ಕಟಾವು ಅನುಮತಿ ಪಡೆದ ನಂತರವು ಏನಾದರು ತೊಂದರೆಗಳು ಬಂದಲ್ಲಿ ಮೇಲಾಧಿಕಾರಿಗಳು ಸದರ ವಿಷಯಕ್ಕೆ ಸಂಬಂಧಿಸಿದಂತೆ ತೆಗೆದುಕೊಳ್ಳುವ ನಿರ್ಣಯವೇ ಅಂತಿಮ. ಅದಕ್ಕೆ ತಮ್ಮ ತಂಟೆ ತಕರಾರುಗಳನ್ನು ಪರಿಗಣಿಸಲಾಗುವದಿಲ್ಲಾ.
7. ಸುರಕ್ಷಾ ಠೇವಣಿ ಹಣವನ್ನು ಫಸಲು ಕಟಾವು ಮುಗಿದ ನಂತರ ಹಿಂತಿರುಗಿಸಲಾಗುವದು. ಫಸಲು ತೆಗೆಯುವಾಗ ಏನಾದರು ಅಪಘಾತ ಸಂಭವಿಸಿದಲ್ಲಿ ಕ.ವಿ.ವಿ ಜವಾಬ್ದಾರವಲ್ಲಾ. ಏನಾದರು ವಿಶ್ವವಿದ್ಯಾಲಯದ ಆಸ್ತಿಗೆ ಹಾನಿಯಾದಲ್ಲಿ ತಾವೇ ತುಂಬಿ ಕೊಡಬೇಕು. ಕೊಂಡ ಫಸಲನ್ನು ತಾವೇ ಕಾಯಬೇಕು. ಟೆಂಡರ ನಡೆಯುವ ಸಮಯದಲ್ಲಿ ಶಾಂತತೆ ಕಾಪಾಡುವದು ತುಂಬಾ ಅವಶ್ಯ. ವಿಶ್ವವಿದ್ಯಾಲಯದ ಅನುಮತಿ ಪತ್ರವಿಲ್ಲದೆ ಯಾವುದೇ ಕಾರಣಕ್ಕೂ ಫಸಲನ್ನು ಕಟಾವು ಮಾಡುವಂತಿಲ್ಲಾ. ಹೆಚ್ಚಿನ ಮಾಹಿತಿಗಾಗಿ ಉದ್ಯಾನ ಇಲಾಖೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಕಚೇರಿ ವೇಳೆಯಲ್ಲಿ ವಿಚಾರಿಸಬಹುದು.

ಕುಲಸಚಿವರು